ವಿಚಾರ ಎತ್ತಿದ್ದೆವು, ಈ ಖಾತೆಯ ವಿತರಣೆಯಲ್ಲಿ, ಸಿಎಂಸಿ ಇರಲಿ ಮತ್ತು ಗ್ರಾಮ ಪಂಚಾಯ್ತಿ ಇರಲಿ ಸಂಪೂರ್ಣವಾಗಿ ನಿಂತಿದೆ, 5 ಸಿಎಂಸಿ ಗಳಲ್ಲಿ ಇರಬಹುದು. ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಇರಬಹುದು ಖಾತೆ ವಿತರಣೆ ಮಾಡದೇ ತುಂಬಾ ಗೊಂದಲವಾಗಿದೆ. ಅದರ ಬಗ್ಗೆ ನಾವು ಎತ್ತಿದ್ದೆವು ತಾವು ಉತ್ತರ ಕೊಟ್ಟಿಲ್ಲ. ಬೆಂಗಳೂರು ಪ್ರಾಧಿಕಾರದಲ್ಲಿ ಡಿ-ನೋಟೀಫಿಕೇಷನ್ ಮಾಡಿರತಕ್ಕಂಥದ್ದು ಕೆಐಎಡಿಬಿ ನಲ್ಲಿ ನೂರಾರು ಎಕರೆ ಜಮೀನನ್ನು ಕೊಟ್ಟಿರತಕ್ಕಂಥದ್ದು ಇದು ಯಾವುದರ ಬಗ್ಗೆಯೂ ಉತ್ತರ ಕೊಟ್ಟಿಲ್ಲ. ರಾಜ್ಯಪಾಲರು ಮಾಡಿರತಕ್ಕಂಥ ಭಾಷಣ ಸಂಪೂರ್ಣವಾಗಿ ಟೊಳ್ಳು ಇರತಕ್ಕಂಥ ಭಾಷಣ ಮತ್ತು ನೂರಕ್ಕೆ ನೂರು ಸುಳ್ಳು ಇರತಕ್ಕಂಥ, ಸತ್ಯಕ್ಕೆ ದೂರ ಇರತಕ್ಕಂಥ ಭಾಷಣ, ಇದನ್ನು ನಾವು ಪ್ರತಿಭಟನೆ ಮಾಡಿ ನಾವು ಇವತ್ತು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಎಬಿಪಿಜೆಡಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಇರುತ್ತೇನೆ ನಾನೇನೂ ವಾಕ್‌ಔಟ್ ಮಾಡುವುದಿಲ್ಲ. ನನಗೆ ಉತ್ತರ ಕೊಟ್ಟರೆ ಸಾಕು. ಈಗ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಖಚಿತವಾಗಿ ಉತ್ತರವನ್ನು ಕೆಲವು ವಿಷಯಗಳ ಮೇಲೆ ನಾನು ಬಯಸುತ್ತೇನೆ. ಒಂದು ನಾನು ಮಾತನಾಡುವಾಗ ಬಹಳ ಮುಖ್ಯವಾಗಿ ಮಾತನಾಡಿರತಕ್ಕಂಥದ್ದು, ತಾವು ಕ್ಯಾಬಿನೆಟ್‌ನಲ್ಲಿ ಇದನ್ನು ಚರ್ಚೆ ಮಾಡಿದ್ದೀರಿ, ಈ ಕೆಎಸ್‌ಆರ್‌ಟಿಸಿ ಗೆ 20 ಕಿಲೋಮೀಟರ್ ಟೌನ್ ಸುತ್ತ ಸುತ್ತಾಡಲಿಕ್ಕೆ ಪರ್ಮಿಷನ್ ಕೊಡತಕ್ಕಂಥ ಒಂದು ನೋಟಿಫಿಕೇಷನ್ ಮಾಡಿದ್ದಿರಿ, ಅದರಿಂದ take it from me in the next 20 months K.S.R.T.C. will become a Company which has to be auctioned. It will become Pauper. 70 ಸಾವಿರ ಜನರಲ್ಲಿ 30 ಸಾವಿರ ಜನರು ಕೆಲಸ ಕಳೆದುಕೊಳ್ಳುತ್ತಾರೆ. ಯಾರು ಇದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಅಡ್ವೈಸ್ ಮಾಡಿದ್ದಾರೆ ಎನ್ನುವುದು ನನಗಿನ್ನೂ ಅರ್ಥವಾಗುತ್ತಿಲ್ಲ. ನಿಮ್ಮ ಕ್ಯಾಬಿನೆಟ್ ಮಂತ್ರಿಗಳಿಗೆ ನಾನು ಇದನ್ನು ಬಹಳ ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. don't destroy that Corporation. It is making a profit of Rs. 150 Crores. It is a model organization in the entire country today. We have toiled for that. ದಯಮಾಡಿ ಅದನ್ನು ಪರಿಶೀಲಿಸತಕ್ಕಂಥ ಭರವಸೆ ಕೊಡಿ ನನಗೆ, I know you cannot say - ಎದ್ದುಕೊಂಡು ನಿಲ್ಲಿಸಿ ಬಿಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. Atleast you give me an assurance. You give an assurance to the people of Karnataka that we will re-consider this issue. ಎಂದು ದಯಮಾಡಿ ಇದು ಒಂದು ಆಗಲೇಬೇಕು. ಯಾರೋ somebody I don't know who has gone to the ears of the Chief Minister ಯಾರೋ ಹೋಗಿ ಅವರ ಕಿವಿ ಕಚ್ಚುತ್ತಾರೆ ಎನ್ನುವುದು ನನಗಿನ್ನೂ ಅರ್ಥವಾಗುತ್ತಿಲ್ಲ. It is going to be ruined. ದಯವಿಟ್ಟು ಅದನ್ನು ಮಾಡಿ, ಎರಡನೇಯದಾಗಿ, ನಮ್ಮ ಶಾಸಕರು ಇರಲಿ, ವಿರೋಧ ಪಕ್ಷದವರು, ನಾವು ಹೇಗೋ ತಪ್ಪಿಸಿಕೊಂಡು ಬಿಡುತ್ತೇವೆ, ಏನ್ರೀ ಕಾಂಗ್ರೇಸ್‌ನವರು ಮಾಡಿರುವುದು ನಮಗೇನು ಹೋಗಿ ಕೇಳ್ರೀ ಅವರಿಗೆ, ಕಾಂಗ್ರೆಸ್‌ಗೆ ಓಟು ಕೊಡಬೇಡಿ ಬುದ್ದಿ ಕಲಿಸಿ ಎಂದು ಹೇಳುತ್ತೇವೆ. ಹಳದಿ ಕಾರ್ಡುಗಳನ್ನು ವಿತರಣೆ ಮಾಡತಕ್ಕಂಥ ವಿಚಾರದಲ್ಲಿ have a deadline. ನೀವು ಫೆಬ್ರವರಿ 10